ಅರ್ಚಕರಾಗಿ ನೇಮಕಾತಿ ಹೊಂದುವವರು ಆಯಾ ದೇವಾಲಯದ ಸಂಪ್ರದಾಯ/ಪದ್ಧತಿಗೆ ಅನುಗುಣವಾಗಿ ನಿಗಧಿಪಡಿಸಿದ ಆಗಮ–ಶಿಕ್ಷಣ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಾಗಿರುವುದು ಕಡ್ಡಾಯವಾಗಿದೆ ಅರ್ಚಕರ ವೃತ್ತಿಗೆ ಸಂಬಂಧಿಸಿದಂತೆ, ಸರ್ಕಾರದ ವತಿಯಿಂದ ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು (ಆಗಮ ವಿಭಾಗ) ಮತ್ತು ಸರ್ಕಾರಿ ಸಂಸ್ಕೃತ ಕಾಲೇಜು ಮೇಲುಕೋಟೆ ಇಲ್ಲಿ ವಿದ್ಯಾರ್ಥಿಗಳಿಗೆ ಆಗಮ ಶಿಕ್ಷಣವನ್ನು ಬೋಧಿಸಲಾಗುತ್ತಿದೆ ಉಳಿದಂತೆ ರಾಜ್ಯದಲ್ಲಿ 27 ಖಾಸಗಿ ಸಂಸ್ಥೆಗಳಿಗೆ ಆಗಮ ಶಿಕ್ಷಣ ಭೋದಿಸಲು ಇಲಾಖೆಯಿಂದ ಅನುಮೋದನೆ ನೀಡಲಾಗಿದೆ ಈ ಪಾಠ ಶಾಲೆಗಳಲ್ಲಿ ಆಗಮ ವಿದ್ಯಾಭ್ಯಾಸ ಮಾಡಲು ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಸಹ - ಅವಕಾಶವಿದ್ದು, ಸಂಸ್ಥೆಗೆ ಪಾವತಿಸುವ ಶುಲ್ಕದಲ್ಲಿ ವಿನಾಯಿತಿ ನೀಡಲಾಗಿದೆ ಶಿಷ್ಯ ವೇತನ ಹಾಗೂ ವಿದ್ಯಾರ್ಥಿನಿಲಯದ ಸೌಲಭ್ಯವನ್ನು ಕಲ್ಪಿಸಲಾಗಿದೆ ಆಸಕ್ತರಾದ ಎಲ್ಲಾ ಕೋಮಿನ ವಿದ್ಯಾರ್ಥಿಗಳು ಈ ಆಗಮ ಶಾಲೆಗಳಿಂದ ಆಗಮ ಶಿಕ್ಷಣ ಪಡೆಯಲು ಅವಕಾಶ ಕಲ್ಪಿಸಲಾಗಿದೆ

ಪ್ರಸ್ತುತ ದೇವಾಲಯದ ಒಳಾಂಗಣ ಮತ್ತು ಹೊರಾಂಗಣ ನೌಕರರ ನೇಮಕಾತಿಗೆ ಸಂಬಂಧಿಸಿದಂತೆ ಮೀಸಲಾತಿಯನ್ನು ಕಲ್ಪಿಸಿಲ್ಲವಾದ್ದರಿಂದ ಅನುವಂಶಿಕ ಹುದ್ದೆಗಳ ನೇಮಕಾತಿಯಲ್ಲಿ ಕೂಡ ಮೀಸಲಾತಿ ಕಲ್ಪಿಸುವ ಬಗ್ಗೆ ಪರಿಶೀಲಿಸಿ, ನಿರ್ಧಾರ ಕೈಗೊಳ್ಳಲಾಗುವುದು

ಇ) 'ಆ' ಗೆ ನೀಡಿರುವ ಉತ್ತರದ ಕಾರಣ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಈ) 'ಆ" ಗೆ ನೀಡಿದ ಉತ್ತರದಿಂದಕ್ಕಾಗಿ ಉದ್ಭವಿಸುವುದಿಲ್ಲ

110 (429) ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ) ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಬಡವರಿಗೆ ನೀಡುವ ಬಿಪಿಎಲ್ ಪಡಿತರ ಕಾರ್ಡ್ ವಿತರಣೆ ಯಾವಾಗ ಪೂರ್ಣಗೊಳಿಸಲಾಗುವುದು ,

ಆ) ವಿಳಂಬಕ್ಕೆ ಕಾರಣಗಳೇನು ,

ಇ) ಶೇಕಡವಾರು ಕಡ್ಡಾಯ ಮಾಡಿದಲ್ಲಿ ನೈಜ ಫಲಾನುಭವಿಗಳಿಗೆ ಅನ್ಯಾಯವಾಗುವುದು ತಿಳಿದಿದೆಯೇ ,

ಈ) ಚಾಮರಾಜನಗರದಂತಹ ತೀರ ಹಿಂದುಳಿದ ಜಿಲ್ಲೆಗೆ ಇಂತಹ ಮಾನದಂಡ ಅನುಸರಿಸುವುದರಿಂದ ಅಲ್ಲಿನ ಬಡವರಿಗೆ ನ್ಯಾಯ ಸಿಕ್ಕದಿರುವುದು ಸರ್ಕಾರಕ್ಕೆ ತಿಳಿದಿದೆಯೇ ,

ಉ) ಎಷ್ಟು ಕಾಲಮಿತಿಯೊಳಗೆ ಪಡಿತರ ಕಾರ್ಡ್‌ಗಳನ್ನು ವಿತರಣೆ ಮಾಡಲಾಗುವುದು ?

ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಸಾರ್ವಜನಿಕರಿಂದ ಸ್ವೀಕರಿಸಲಾಗಿರುವ ಎಲ್ಲಾ ಅಹವಾಲುಗಳನ್ನು ಪೂರ್ಣ ಪ್ರಮಾಣದಲ್ಲಿ ವಿಲೇವಾರಿಗೊಳಿಸಿ ಕಾರ್ಯ ಕ್ರಮವನ್ನು ಪೂರೈಸಲಾಗುವುದು

ಆ) ಸಾರ್ವಜನಿಕರಿಂದ ನಿರೀಕ್ಷೆಗೂ ಮೀರಿ ಅಹವಾಲುಗಳು ಸ್ವೀಕೃತವಾದ್ದರಿಂದ ವಿಳಂಬವಾಗಿರುತ್ತದೆ

ಇ) ನೈಜ ಫಲಾನುಭವಿಗಳಿಗೆ ಅನ್ಯಾಯವಾಗದಂತೆ ಅರ್ಹರಿಗೆ ಪಡಿತರ ಚೀಟಿಯನ್ನು ವಿತರಿಸಲಾಗುವುದು

ಈ) ರಾಜ್ಯಾದ್ಯಂತ ಸಮೀಕ್ಷೆಯನ್ನು ಕೈಗೊಂಡು ವಿವಿಧ ವರ್ಗವಾರು ನೈಜ ಫಲಾನುಭವಿಗಳನ್ನು ಗುರುತಿಸಲಾಗಿದ್ದು, ಅರ್ಹತೆಗೆ ಅನುಗುಣವಾಗಿ ಪಡಿತರ ಚೀಟಿಯನ್ನು ವಿತರಿಸಲಾಗುವುದು

ಉ) ಅಹವಾಲುಗಳ ಪೂರ್ಣ ವಿಲೇವಾರಿಯ ನಂತರ ಖಾಯಂ ಪಡಿತರ ಚೀಟಿಗಳ ವಿತರಣೆಗೆ ಕ್ರಮ ಕೈಗೊಳ್ಳಲಾಗುವುದು ನಂತರ ಖಾಯಂ ಪಡಿತರ ಚೀಟಿಯನ್ನು ನೀಡಲಾಗುವುದು, ಮೇಲ್ಕಂಡ ಎಲ್ಲಾ ಕಾರ್ಯಕ್ರಮಗಳನ್ನು ಪೂರೈಸಲು ಕನಿಷ್ಠ 6 ತಿಂಗಳ ಕಲಾವಕಾಶ ಬೇಕಿರುತ್ತದೆ

111 (430) ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ) ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿ ಇರುವ ಒಳನಾಡು / ಕರಾವಳಿ ಮೀನುಗಾರರಿಗೆ ನೀಡುತ್ತಿರುವ ಅನುದಾನವೆಷ್ಟು ಹಾಗೂ ಅವರ ಅಭಿವೃದ್ಧಿಗೆ ತೆಗೆದುಕೊಂಡಿರುವ ಕ್ರಮಗಳೇನು ,

ಆ) ಒಳನಾಡು ಮೀನುಗಾರರಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,